# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 361/16

ಸಿ.ಡಬ್ಲ್ಯು 1
ಪಿ.ಡಬ್ಲ್ಯು 4

| | | |
|---|---|---|
| ಸಾಕ್ಷಿದಾರರ ಹೆಸರು | – | ಈರಣ್ಣ ಲಾಳಸಂಗಿ |
| ತಂದೆಯ ಹೆಸರು | – | ಸಿದ್ಧರಾಮಪ್ಪ ಲಾಳಸಂಗಿ |
| ವಯಸ್ಸು | – | 66 ವರ್ಷ |
| ಉದ್ಯೋಗ | – | ನಿವೃತ್ತ ನೌಕರ |
| ವಾಸ್ತವ್ಯ | – | ವಿಜಯಪುರ |

(ಇಂದು ದಿನಾಂಕಃ 28–06–2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನನಗೆ ಪ್ರಕಾಶ ಭೀಮರಾಯ್ ಆಲವಳ್ಳಿ ಇವರ ಪರಿಚಯ ಇದೆ. 2002 ನೇ ಇಸವಿಯಲ್ಲಿ ನಾನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬಿಜಾಪುರದಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಬಇದೆ. ಸದರಿ ದಾಖಲೆ ಜಪ್ತು ಪಂಚನಾಮೆಯಾಗಿದ್ದು, ಅದಕ್ಕೆ 2002 ರಲ್ಲಿ ಕಚೇರಿಯಲ್ಲಿ ಸಹಿ ಹಾಕಿರುತ್ತೇನೆ. ಸದರಿ ದಾಖಲೆ ಜಪ್ತು ಪಂಚನಾಮೆಯಾಗಿದ್ದು, ಸದರಿ ಜಪ್ತು ಪಂಚನಾಮೆಯನ್ನು ನಿ.ಪಿ.7 ಎಂದು, ಸಾಕ್ಷಿ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ದಾಖಲೆಗಳನ್ನು ಜಪ್ತು ಮಾಡಿರುವುದಿಲ್ಲ. ನಿ.ಪಿ.7 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಹಿರಿಯ ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ದಿನಾಂಕಃ 25-05-2002 ರಂದು ನನ್ನ ಮತ್ತು ಪ್ರಕಾಶ ಆಲವಳ್ಳಿ ಇವರ ಸಮಕ್ಷಮ ಬಿಜಾಪುರದ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಚೇರಿಯಲ್ಲಿ ಮಧ್ಯಾಹ್ನ 1.00 ಗಂಟೆಯಿಂದ 2.00 ಗಂಟೆಯವರೆಗೆ ಪಂಚನಾಮೆ ಮಾಡಿ, ಶಬಿಯಾ ಅಬ್ದುಲ್ ಖಾದರ ಮುಜಾವರ ಇವರಿಗೆ ಸೇರಿದ ಸಿಂಧುತ್ವ ಪ್ರಮಾಣಪತ್ರವನ್ನು ಹಾಗೂ ಅದಕ್ಕೆ ಅಳವಡಿಸಿದ ಪುಟ ಸಂಖ್ಯೆ 1 ರಿಂದ 24 ಪತ್ರಗಳನ್ನು, ನಾದಿಮಾ ಸನಾವುಲ್ಲಾ ಇವರ ಸಿಂಧುತ್ವ ಪ್ರಮಾಣಪತ್ರದ ಫೈಲನ್ನು, ಸಬಿನಾ ಮೈನುದ್ದಿನ್ ಮನಗುಳಿ ಇವರ ಸಿಂಧುತ್ವ ಪ್ರಮಾಣಪತ್ರದ ಫೈಲನ್ನು, ಅಬ್ದುಲ್ ಖಾದಿರ ಅಲಿಸಾಬ ಶೇಖ್ ಇವರ ಸಿಂಧುತ್ವ ಪ್ರಮಾಣಪತ್ರದ ಫೈಲನ್ನು, ತಸ್ಲಿಮ ಭಾನು ಅಬ್ದುಲ್ ಸತ್ತಾರ ಖಾಜಿ ಇವರ ಸಿಂಧುತ್ವ ಪ್ರಮಾಣಪತ್ರದ ಫೈಲನ್ನು, ಬಿ.ಬಿ. ಕೌಸರ ಸಯ್ಯದ ಜಕ್ರಿಯಾ ಇವರ ಸಿಂಧುತ್ವ ಪ್ರಮಾಣಪತ್ರದ ಫೈಲನ್ನು ಹಾಗೂ ರಜಿಯಾ ಸುಲ್ತಾನ ಮಹಮ್ಮದ್ ಮುಸ್ತಾಪ್ ಇವರ ಸಿಂಧುತ್ವ ಪ್ರಮಾಣಪತ್ರದ ಫೈಲನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.7 ರಂತೆ ಪಂಚನಾಮೆ ಮಾಡಿ ದಾಖಲೆಗಳನ್ನು ವಶಪಡಿಸಿಕೊಂಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ.ವಿ.ಜಿ. ವಕೀಲರಿಂದಃ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ